<u>ಸಾಕ್ಷಿಗೆ ದಿನಾಂಕ  ***12 -02-2026*** ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು : ***13*** ರಿಂದ ***16*** ನೇ ಪ್ರತಿವಾದಿಯ ರ ಪರ ಶ್ರೀಮತಿ ವಿ ಎನ್ ಹೆಚ್ ವಕೀಲರಿಂದಃ</u>

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನು ಹೇಳಿ ಬರೆಸಿರುತ್ತೇನೆ. ವಾದಿ ಮತ್ತು ಪ್ರತಿವಾದಿಯರ ಮನೆತನದ ಸಂಪೂರ್ಣ ಮಾಹಿತಿ ನನಗೆ ಇರುತ್ತದೆ. ವೀರಪ್ಪ ಮತ್ತು ಚನ್ನಪ್ಪ ರವರ ಮಕ್ಕಳ ಮೇಲೆ ಚನ್ನಬಸಪ್ಪ ರವರ ಮಕ್ಕಳು ದಾವೆಯನ್ನು ಮಾಡಿರುತ್ತಾರೆ. ಚನ್ನಬಸಪ್ಪ ರವರ ಮಕ್ಕಳು ಯಾರು ಎಂದು ಗೊತ್ತಿರುವುದಿಲ್ಲ. ಆದರೆ 5 ಜನ ಹೆಣ್ಣುಮಕ್ಕಳು ಮತ್ತು ಒಬ್ಬ ಗಂಡು ಮಗ ಮಾಡಿರುತ್ತಾನೆ. ದಾವಾ ಆಸ್ತಿಗಳು ಗೋಕಾವಿ ಮನೆತನದ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸಾಕ್ಷಿದಾರರು ರುದ್ರಪ್ಪ ರವರಿಗೆ ಸ್ವಾತಂತ್ರ್ಯ ಯೋಧ ಎಂದು ತುಳಸಿಗೇರಿ ಗ್ರಾಮದಲ್ಲಿ 4 ಎಕರೆ ಜಮೀನು ಕೊಟ್ಟಿದ್ದು ಮತ್ತು ಅಮೀನಗಡದಲ್ಲಿ ಇರುವ 6 ಎಕರೆ ಜಮೀನನ್ನು ಈರಪ್ಪ ಮತ್ತು ಚನ್ನಪ್ಪ ರವರು ಖರೀದಿ ಹಿಡಿದಿರುತ್ತಾರೆ ಎಂದು ಹೇಳುತ್ತಾರೆ. ಅಮೀನಗಡದ ಜಮೀನು ಸರ್ವೆ ನಂ. 317/1 ಕ್ಷೇತ್ರ 3 ಎಕರೆ 8 ಗುಂಟೆ ಮತ್ತು ಇನ್ನೊಂದು ಸರ್ವೆನಂ. 317/ಎ ಕ್ಷೇತ್ರ 3 ಎಕರೆ 8 ಗುಂಟೆ ಇರುತ್ತದೆ. ಈರಪ್ಪ ಮತ್ತು ಚನ್ನಪ್ಪ ರವರು ಖರೀದಿಸಿದ್ದ ಖರೀದಿ ಪತ್ರವನ್ನು ನೀವೇನಾದರೂ ನೋಡಿದ್ದೀರಾ ಎಂದರೆ ಸಾಕ್ಷಿದಾರರು ನೋಡಿರುವುದಿಲ್ಲ ಎಂದು ಹೇಳುತ್ತಾರೆ. ರುದ್ರಪ್ಪ ಗೋಕಾವಿ ಯವರು ಬಸಪ್ಪ ರವರಿಂದ ಸರ್ವೆ ನಂ. 317 ನ್ನು ಖರೀದಿ ಮಾಡಿರುತ್ತಾರೆ ಎಂದು ತೋರಿಸಲು 6 ನೇ ಪ್ರತಿವಾದಿಯು ಖರೀದಿ ಪತ್ರವನ್ನು ಹಾಜರು ಪಡಿಸಿರುತ್ತಾರೆ ಮತ್ತು ಅದು ನಿಡಿ-49 ಎಂದು ಗುರುತಿಸಲಾಗಿದೆ ಎಂದರೆ ಸಾಕ್ಷಿದಾರರು ಅವರು ಹಾಜರು ಪಡಿಸಿರಬಹುದು ಎಂದು ಹೇಳುತ್ತಾರೆ. ನನಗೆ ಗೋಕಾವಿ ಮನೆತನದ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ 6 ನೇ ಪ್ರತಿವಾದಿಗೆ ಅನುಕೂಲ ಆಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ರುದ್ರಪ್ಪ ರವರು ಖರೀದಿ ಹಿಡಿದಿದ್ದರಿಂದ ಸದರಿ ಆಸ್ತಿಯು ವಾದಿ ಮತ್ತು ಪ್ರತಿವಾದಿಯರ ಮನೆತನದ ಪಿತ್ರಾರ್ಜಿತ ಆಸ್ತಿ ಆಗುತ್ತದೆ ಎಂದರೆ ಸಾಕ್ಷಿದಾರರು ಸದರಿ ಆಸ್ತಿಯನ್ನು ಈರಪ್ಪ ಮತ್ತು ಚನ್ನಪ್ಪ ರವರು ರುದ್ರಪ್ಪ ರವರ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿಗಳು ಯಾವವು ಎಂದರೆ ಸಾಕ್ಷಿದಾರರು 8 ಎಕರೆ 16 ಗುಂಟೆ ಇರುವ ಒಂದು ಜಮೀನು, ಮನೆ ನಂ. 479, ಪ್ಲಾಟ ನಂ.11, ಪ್ಲಾಟ ನಂ. 11 ರಲ್ಲಿ ಇರುವ ಒಂದು ಮನೆ, ಪ್ಲಾಟ ನಂ. 14 ರಲ್ಲಿ ಇರುವ ಒಂದು ಮನೆ ಮತ್ತು ತುಳಸಿಗೇರೆಯಲ್ಲಿ 4 ಎಕರೆ ಜಮೀನು ಇರುತ್ತವೆ. ಪ್ಲಾಟ ನಂ. 11 ರಲ್ಲಿ ಇರುವ ಮನೆ ನಂಬರ

ಗೊತ್ತಿರುವುದಿಲ್ಲ.

ರುದ್ರಪ್ಪ ರವರಿಗೆ ಒಬ್ಬ ಹೆಣ್ಣು ಮಗಳು ಮತ್ತು 3 ಜನ ಗಂಡು ಮಕ್ಕಳು. ಅವರೆಂದರೆ, ಶಂಕ್ರಮ್ಮ, ಚನ್ನಬಸಪ್ಪ, ಈರಪ್ಪ ಮತ್ತು ಚನ್ನಪ್ಪ. ಶಂಕ್ರಮ್ಮ ರವರನ್ನು ನಾಗರಾಳ ಗ್ರಾಮಕ್ಕೆ ಮದುವೆ ಮಾಡಿ ಕೊಟ್ಟಿರುತ್ತಾರೆ. ಅವರ ಮದುವೆ ಯಾವಾಗ ಆಗಿರುತ್ತದೆ ಎಂದು ಗೊತ್ತಿರುವುದಿಲ್ಲ. ಶಂಕ್ರಮ್ಮ ರವರು 1932 ರಲ್ಲಿ ಜನಿಸಿರುತ್ತಾರೆ. ಅವರ ಜನನ ದಾಖಲೆಯನ್ನು ಹಾಜರು ಪಡಿಸಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು 1952 ರಲ್ಲಿ ಜನಿಸಿರುತ್ತೇನೆ. ನಾನು 3 ನೇ ತರಗತಿಯವರೆಗೆ ಓದಿರುತ್ತೇನೆ. ಶಂಕ್ರಮ್ಮ ರವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಶಂಕ್ರಮ್ಮ ರವರ ಮದುವೆ 1958 ರಲ್ಲಿ ಆಗಿರುತ್ತದೆ ಎಂದು ವಿರುಪಾಕ್ಷಪ್ಪ ರವರ ಮನೆಯವರು ಹೇಳಿರುತ್ತಾರೆ. ಶಂಕ್ರಮ್ಮ ರವರ ಮದುವೆಯ ಸಮಯದಲ್ಲಿ ವರದಕ್ಷಿಣೆ ವರೋಪಚಾರ ಕೊಟ್ಟು ಮದುವೆ ಮಾಡಿರುತ್ತಾರೆ ಎಂದು ವಿರುಪಾಕ್ಷಪ್ಪ ರವರ ಮನೆಯವರು ಹೇಳಿರುತ್ತಾರೆ. ಎಷ್ಟು ವರದಕ್ಷಿಣೆ ವರೋಪಚಾರ ಕೊಟ್ಟಿರುತ್ತಾರೆ ಎಂದು ನನಗೆ ಹೇಳಿರುವುದಿಲ್ಲ. ನಾನು ಹಿಂದೂ ದೇವಾಂಗ ಸಮಾಜದಲ್ಲಿ ಹಿರಿತನ ಮಾಡುತ್ತೇನೆ ಎಂದರೆ ಸರಿ. ಗೋಕಾವಿ ಮನೆತನ ಮತ್ತು ನಮ್ಮ ಮನೆತನಕ್ಕೆ ದೂರದ ಸಂಬಂದ ಇರುತ್ತದೆ. ವಾದಿ ಮತ್ತು ಪ್ರತಿವಾದಿಯರ ಮನೆತನದಲ್ಲಿ ಪಾಲು ವಾಟ್ನಿ ಆಗಿರುವುದಿಲ್ಲ ಎಂದರೆ ಸಾಕ್ಷಿದಾರರು 1995 ರಲ್ಲಿ ಪಾಲುವಾಟ್ನಿ ಆಗಿರುತ್ತದೆ ಎಂದು ಹೇಳುತ್ತಾರೆ. ಪಾಲುವಾಟ್ನಿ ಆದ ಕುರಿತು ದಾಖಲೆಗಳನ್ನು ಹಾಜರು ಪಡಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪಾಲುವಾಟ್ನಿ ಯಲ್ಲಿ ನಾನು ಭಾಗವಹಿಸಿದ್ದೆ. ಪಾಲುವಾಟ್ನಿ ಯಲ್ಲಿ ಈರಣ್ಣ, ಚನ್ನಪ್ಪ, ಚನ್ನಬಸಪ್ಪರವರ ಹೆಂಡತಿ ಮತ್ತು ಮಗ ಇದ್ದರು. ಪಾಲುವಾಟ್ನಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವ ಪ್ರಕಾರ ಶಂಕ್ರವ್ವ ರವರು ಪಾಲುವಾಟ್ನಿಯಲ್ಲಿ ಭಾಗವಹಿಸಿರಲಿಲ್ಲ ಎಂದರೆ ಸರಿ. ಸದರಿ ಪಾಲುವಾಟ್ನಿ ಆಗುವಾಗ ಚನ್ನಬಸಪ್ಪ ರವರ ಮಕ್ಕಳಾದ ಶೋಭಾ ಮತ್ತು ಶಾಂತಾ ಇದ್ದರು. ಪಾಲುವಾಟ್ನಿ ಪತ್ರಕ್ಕೆ ಚನ್ನಬಸಪ್ಪ ರವರ ಹೆಂಡತಿ ಮತ್ತು ಮಗ ಸಹಿ ಮಾಡಿರುತ್ತಾರೆ. ಆದರೆ ಅವರ ಹೆಣ್ಣು ಮಕ್ಕಳು ಸಹಿ ಮಾಡಿರುವುದಿಲ್ಲ. 6 ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಂಕ್ರಮ್ಮ ರವರಿಗೆ ಎಷ್ಟು ಜನ ಮಕ್ಕಳು ಇರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 13 ರಿಂದ 16 ನೇ ಪ್ರತಿವಾದಿಯರು ಶಂಕ್ರಮ್ಮ ರವರ ಮಗನ ಮಕ್ಕಳುಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂ. 317 ಇದು ಮೂಲತಃ ಕೃಷಿ ಜಮೀನು ಎಂದರೆ

ಸರಿ. ಇದನ್ನು ಬಿನ್ ಶೇತ್ಕಿಯಾಗಿ ವಿರುಪಾಕ್ಷಪ್ಪ ಮತ್ತು ಬಸವರಾಜ ರವರು ಪರಿವರ್ತಿಸಿರುತ್ತಾರೆ. ಚನ್ನಪ್ಪ ರವರು ಬಿನ್ ಶೇತ್ಕಿಯಾಗಿ ಪರಿವರ್ತನೆ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ಅವರು ಬಿನ್ ಶೇತ್ಕಿ ಮಾಡಲು ಅರ್ಜಿ ಕೊಟ್ಟಿರಬಹುದು ಎಂದು ಹೇಳುತ್ತಾರೆ. ಸರ್ವೆ ನಂ. 317/2 ನ್ನು ಯಾರು ಬಿನ್ ಶೇತ್ಕಿಯಾಗಿ ಪರಿವರ್ತನೆ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ಸಂಪೂರ್ಣ 6 ಎಕರೆ ಕ್ಷೇತ್ರವನ್ನು ವಿರುಪಾಕ್ಷಪ್ಪ ಮತ್ತು ಬಸವರಾಜ ರವರು ಬಿನ್ ಶೇತ್ಕಿಯಾಗಿ ಪರಿವರ್ತನೆ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಈ ವಿಷಯ ಸುಳ್ಳು ಇರುತ್ತದೆ ಮತ್ತು 6 ನೇ ಪ್ರತಿವಾದಿಗೆ ಅನುಕೂಲ ಆಗಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಂಕ್ರಮ್ಮ ರವರಿಗೆ ರುದ್ರಪ್ಪ ರವರ ಆಸ್ತಿಗಳಲ್ಲಿ ಯಾವುದೇ ಹಿಸ್ಸಾ ಕೊಟ್ಟಿರುವುದಿಲ್ಲ ಎಂದರೆ ಸರಿ. ರುದ್ರಪ್ಪ ರವರ ಗಂಡು ಮಕ್ಕಳಿಗೆ ಎಷ್ಟು ಹಕ್ಕು ಇರುತ್ತದೆಯೋ ಅಷ್ಟೆ ಹಕ್ಕು ಶಂಕ್ರಮ್ಮ ರವರಿಗೆ ಇರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ. 213/ಸಿ ಯಲ್ಲಿ ಶಂಕ್ರಮ್ಮ ರವರಿಗೂ ಕೂಡ ಸರಿಸಮ ಪಾಲು ಇರುತ್ತದೆ ಎಂದರೆ ಸರಿಯಲ್ಲ. 1995 ರಲ್ಲಿ ಪಾಲುವಾಟ್ನಿ ಪ್ರಕಾರ ವಾದಿ ಮತ್ತು ಪ್ರತಿವಾದಿಯರಿಗೆ ಪಾಲು ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರುದ್ರಪ್ಪ ರವರ ಹೆಂಡತಿಯ ಹೆಸರು ನೀಲಮ್ಮ. 1990 ರಲ್ಲಿ ರುದ್ರಪ್ಪ ರವರು ತೀರಿಕೊಂಡ ನಂತರ ಚನ್ನಪ್ಪ ಮತ್ತು ಈರಪ್ಪ ರವರು ಕೇವಲ ತಮ್ಮ ಹೆಸರುಗಳನ್ನು ಮಾತ್ರ ವಾರಸಾ ಪ್ರಕಾರ ದಾಖಲಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕಾರ ಡ ನಂ. 4086 ರಚನೆ ಆಗಿದ್ದು, ಅದು ಖೊಟ್ಟಿ ಆಗಿರುತ್ತದೆ ಎಂದರೆ ಸರಿಯಲ್ಲ. ರುದ್ರಪ್ಪ ರವರ ಮಗ ಈರಪ್ಪ ರವರು ಒಂಟಿ ಗೋಡಿ ಎನ್ನುವವರಿಗೆ ಮಾರಾಟ ಮಾಡಿದ್ದು, ಸದರಿ ಮಾರಾಟವು ಖೊಟ್ಟಿ ಆಗಿದ್ದು, ನಾಮ ಮಾತ್ರ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 7 ನೇ ಪ್ಯಾರಾದಲ್ಲಿ ನಮೂದಿಸಿದಂತೆ 2008 ರಲ್ಲಿ ಹಿರಿಯರ ಸಮಕ್ಷಮ ದಾಖಲೆ ಆಗಿರುತ್ತದೆ ಎಂದು ಸುಳ್ಳಾಗಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಒಂಟಿಗೋಡಿ ಎನ್ನುವವರಿಗೆ ಮಾರಾಟ ಮಾಡಿದ ವ್ಯವಹಾರದಲ್ಲಿ ನಾನು ಭಾಗವಹಿಸಿರುವುದಿಲ್ಲ. ವಿರುಪಾಕ್ಷಪ್ಪ ರವರು ಸದರಿ ವಿಷಯದ ಕುರಿತು ಮಾಹಿತಿ ನೀಡಿರುತ್ತಾರೆ. ನನಗೆ ಈ ವಿಷಯದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಶಂಕ್ರಪ್ಪ ರವರು 2016 ರಲ್ಲಿ ತೀರಿಕೊಂಡಿದ್ದು, ಈ ಕುರಿತು ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ನನಗೆ ಯಾವುದೇ ಮಾಹಿತಿ ಇರದೇ ಇದ್ದರೂ ಮಾಹಿತಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಂಕ್ರಮ್ಮ ರವರು 1997 ರ ಮೊದಲೇ ತೀರಿಕೊಂಡಿರುತ್ತಾರೆ. ಮನೆ ನಂ. 479

ಮತ್ತು 14 ಇವು ಗೋಕಾವಿ ಮನೆತನದ ಪಿತ್ರಾರ್ಜಿತ ಆಸ್ತಿ ಎಂದರೆ ಸಾಕ್ಷಿದಾರರು ಕೇವಲ ಮನೆ ನಂ. 479 ಮಾತ್ರ ಮನೆತನದ ಆಸ್ತಿ ಆಗಿದ್ದು ಮತ್ತು ಮನೆ ನಂ. 14 ನ್ನು ಈರಪ್ಪ ರವರು ಕಟ್ಟಿಸಿರುತ್ತಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿಗಳಲ್ಲಿ ಶಂಕ್ರಮ್ಮ ರವರಿಗೆ ¼ **ಹಿಸ್ಸಾ** ಇದ್ದು, ಅವರ ಮರಣಾ ನಂತರ ಅವರ ಮೊಮ್ಮಕ್ಕಳಿಗೆ ಬರುತ್ತದೆ ಎಂದರೆ ಸರಿಯಲ್ಲ. ಪ್ಲಾಟ ನಂ. 11 ಮತ್ತು 11 ಎ ಇವುಗಳು ಪಿತ್ರಾರ್ಜಿತ ಆಸ್ತಿಗಳಾಗಿದ್ದು, ಅವುಗಳನ್ನು ಮಾರಾಟ ಮಾಡಲು 4 ನೇಪ್ರತಿವಾದಿಗೆ **ಯಾವುದೇ** ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪ್ಲಾಟಗಳಲ್ಲಿ ಶಂಕ್ರಮ್ಮ ರವರಿಗೆ ಕಾಯ್ದೇಬದ್ದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.